ಅಸಲು ದಾವಾ ನಂ.55/2017
ಡಿ ಡಬ್ಲ್ಯು-13

ದಿನಾಂಕಃ 19-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**<u>ಪಾಟೀಸವಾಲುಃ- ವಾದಿ ಪರ ಶ್ರೀ. ಎನ್ ಆರ್ ಬಿ ವಕೀಲರಿಂದ.</u>**

ವಾದಿಯರು ನಮ್ಮ ಮೇಲೆ ಏನು ಪರಿಹಾರ ಬೇಡಿ ದಾವೆ ಸಲ್ಲಿಸಿರುತ್ತಾರೆ ಎಂದು ಗೊತ್ತಿಲ್ಲ. ನಾವು ಆಸ್ತಿ ಖರೀದಿ ಹಿಡಿದಿರುವುದಾಗಿ ಸಾಕ್ಷಿ ಸ್ವತಃ ನುಡಿಯುತ್ತಾರೆ. ನಾನು 5 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಸಾಮಾನ್ಯವಾಗಿ ಆಸ್ತಿ ಖರೀದಿ ಹಿಡಿಯುವಾಗ ಆಸ್ತಿಯು ಯಾರ ಹೆಸರಿನಲ್ಲಿ ಇರುತ್ತದೆ ಎಂದು ವಿಚಾರಣೆ ಮಾಡಿ ಖರೀದಿ ಹಿಡಿಯುತ್ತಾರೆ ಎಂದರೆ ಸರಿ. ನಾನು ಹುರುಳಿಕುಪ್ಪಿ ಗ್ರಾಮದವನು ಎಂದರೆ ಸರಿ. ನನಗೆ ಗುರುದೇವ ಮತ್ತು ದತ್ತಾತ್ರೇಯ ಕುಲಕರ್ಣಿ ಇವರ ಪರಿಚಯ ಇಲ್ಲ. ಅದೇ ರೀತಿ ನನಗೆ ವಿನಾಯಕರಾವ್ ಕುಲಕರ್ಣಿ ಇವರ ಪರಿಚಯ ಇಲ್ಲ ಎಂದರೆ ಸರಿ. ವಿನಾಯಕರಾವ್ ವಾದಿ ನಂ.1 ಇವರ ಗಂಡ ಎಂದರೆ ಸರಿ. ವಾದಿ ನಂ.2, 3 ಮತ್ತು ಪ್ರತಿವಾದಿ ನಂ.1 ವಿನಾಯಕರಾವ್ ಇವರ ಮಕ್ಕಳು ಎಂದರೆ ಸರಿ. ದತ್ತಾತ್ರೇಯ ಕುಲಕರ್ಣಿ ಇವರ ಘರಾಣೇ ಬೇರೆ ಎಂದರೆ ಸರಿ. ಗುರುದೇವ ಮತ್ತು ವಿನಾಯಕರಾವ್ ಕುಲಕರ್ಣಿ ಇವರ ಘರಾಣೇ ಸಹ ಬೇರೆ ಎಂದರೆ ಸರಿ. ಗುರುದೇವ ಮತ್ತು ದತ್ತಾತ್ರೇಯ ಇವರು ಹನುಮಂತರಾಯ ಇವರ ಮಕ್ಕಳು ಎಂದರೆ ಸರಿ. ಅವರು ವಿನಾಯಕರಾವ್ ಇವರ ತಂದೆಯ ಅಣ್ಣನ ಮಕ್ಕಳು ಎಂದರೆ ಸರಿ. ಗುರುದೇವ, ದತ್ತಾತ್ರೇಯ ಮತ್ತು ವಿನಾಯಕರಾವ್ ಇವರು 1993 ರಲ್ಲಿಯೇ ಬೇರೆಯಾಗಿರುತ್ತಾರೆ ಎಂದರೆ ಸರಿ. ಸಾಕ್ಷಿ ವಿನಾಯಕರಾವ್ ಇವರ 03 ಎಕರೆ 17 ಗುಂಟೆ ಕ್ಷೇತ್ರದಲ್ಲಿ 05 ಗುಂಟೆ 4 ವರೆ ಅಣೆ, 05 ಗುಂಟೆ 6 ವರೆ ಅಣೆ ಖರೀದಿ ಹಿಡಿದಿರುವುದಾಗಿ ನುಡಿಯುತ್ತಾರೆ. ಹಾಗೇ ನಾನು 2000 ನೇ ಇಸ್ವಿಯಲ್ಲಿ ಖರೀದಿ ಹಿಡಿದಿರುತ್ತೇನೆ. ಖರೀದಿ ಹಿಡಿದ ನಂತರ ಮೂಲ ಮಾಲೀಕರ ಹೆಸರು ಕಡಿಮೆಯಾಗಿ ಖರೀದಿ ಹಿಡಿದವರ ಹೆಸರು ನೋಂದಾವಣೆಯಾಗುತ್ತದೆ ಎಂದರೆ ಸರಿ. ನಾನು ಹಾಗೇ ಖರೀದಿ ಹಿಡಿದ ನಂತರ ಪಹಣಿಯಲ್ಲಿ ನನ್ನ ಹೆಸರು ಹಚ್ಚಿಕೊಳ್ಳಲು ಪ್ರಯತ್ನ ಮಾಡಿಲ್ಲ. ಆದ್ದರಿಂದ ಈಗಲೂ ವಾದಿಯರು ಮತ್ತು 1 ನೇ ಪ್ರತಿವಾದಿಯ ಹೆಸರು ಪಹಣಿಯಲ್ಲಿ ನಮೂದು ಇರುತ್ತವೆ ಎಂದರೆ ಸರಿಯಲ್ಲ.

2. ನಾನು ಪ್ಲಾಟ್ ನಂ.38 ಖರೀದಿ ಹಿಡಿದಿರುತ್ತೇನೆ. ಈಗಲೂ ಸಹ ಪ್ಲಾಟ್ ನಂ.38 ರ ಪಹಣಿಯಲ್ಲಿ ವಿನಾಯಕರಾವ್, ದತ್ತಾತ್ರೇಯ ಮತ್ತು ಗುರುರಾವ್ ಇವರ ಹೆಸರು ನಮೂದು ಇರುತ್ತದೆ ಎಂದರೆ ಸರಿ. ಪ್ಲಾಟ್ ನಂ.38 ಖರೀದಿ ಹಿಡಿಯುವ ಪೂರ್ವದಲ್ಲಿ ಅದರ ಮಾಲೀಕರ ಹೆಸರು ಗ್ರಾಮ ಪಂಚಾಯತಿ ದಾಖಲೆಗಳಲ್ಲಿ ಇದ್ದ ಬಗ್ಗೆ ಪರಿಶೀಲನೆ ಮಾಡಿಲ್ಲ. ಸರ್ವೆ ನಂ.164 ಯಾವ ಇಸ್ವಿಯಲ್ಲಿ ಭೂಪರಿವರ್ತನೆ ಆಯಿತು ಎಂದು ಗೊತ್ತಿಲ್ಲ. 2000 ನೇ ಇಸ್ವಿಯಲ್ಲಿ ನನ್ನ ವಯಸ್ಸು 18 ಇತ್ತು. ನನ್ನ ತಂದೆ ಖರೀದಿ ಹಿಡಿದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಖರೀದಿ ಮಾತುಕತೆ ನಮ್ಮ ಊರಿನಲ್ಲಿ ಆಗಿರುತ್ತದೆ, ಆದರೆ ದಿನಾಂಕ ಗೊತ್ತಿಲ್ಲ. ಯಾರ ಮನೆಯಲ್ಲಿ ಖರೀದಿ ಮಾತುಕತೆ ಆಗಿರುತ್ತದೆ ಎಂಬ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

3. ನಾನು ತಕರಾರು ಬರೆಯಲು ಮಾಹಿತಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ತಕರಾರಿನ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ. ವಿನಾಯಕರಾವ್ ಕುಲಕರ್ಣಿ ಯಾವ ಇಸ್ವಿಯಂದು ತೀರಿಕೊಂಡಿರುತ್ತಾರೆ ಎಂದು ಗೊತ್ತಿಲ್ಲ. ವಿನಾಯಕರಾವ್ ಕುಲಕರ್ಣಿ ಇವರ ಮಕ್ಕಳು ಮತ್ತು ಪತ್ನಿ ವಯಸ್ಕರು ಇದ್ದರು ಎಂದರೆ ಸರಿಯಲ್ಲ. ವಾದಿಯರ ಮತ್ತು ಪ್ರತಿವಾದಿ ನಂ.1 ಇವರ ಸಹಿಯನ್ನು ಖರೀದಿ ಪತ್ರದ ಮೇಲೆ ಪಡೆದುಕೊಳ್ಳಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಖರೀದಿ ಪತ್ರದ ಮೇಲೆ ಅವರ ಸಹಿ ಪಡೆದುಕೊಂಡಿದ್ದೇನೆಯೋ ಇಲ್ಲವೋ ಗೊತ್ತಿಲ್ಲ. ನಿಡಿ-129 ರ ಮೇಲೆ ವಾದಿಯರ ಮತ್ತು 1 ನೇ ಪ್ರತಿವಾದಿಯ ಸಹಿ ಇಲ್ಲ ಎಂದರೆ ಸರಿ. ಖರೀದಿ ವ್ಯವಹಾರವು ರೂ.1,17,000/- ಗಳಿಗೆ ಆಗಿರುತ್ತದೆ. ವಿನಾಯಕರಾವ್ ಕುಲಕರ್ಣಿ ಇವರ ಮನೆತನಕ್ಕೆ ಏನು ಅಡಚಣೆ ಇತ್ತು ಎಂದು ಗೊತ್ತಿಲ್ಲ. ವಾದಿಯರ ಮತ್ತು 1 ನೇ ಪ್ರತಿವಾದಿಯ ಮನೆತನಕ್ಕೆ ಯಾವುದೇ ಅಡಚಣೆ ಇರಲಿಲ್ಲ, ನಮ್ಮ ತಂದೆ ಸುಳ್ಳು ಖರೀದಿ ಪತ್ರ ಬರೆಯಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಖರೀದಿ ರಕಂನ್ನು ನಗದು ರೂಪದಲ್ಲಿ ನಮ್ಮ ತಂದೆ ಕೊಟ್ಟಿರುತ್ತಾರೆ. ಖರೀದಿ ಪತ್ರದಲ್ಲಿ ಈ ಮೊದಲೇ ಕೊಟ್ಟಿರುವುದಾಗಿ ಹೇಳಿದ್ದು ಯಾವ ದಿನಾಂಕ ಎಂದು ಬರೆಯಿಸಿಲ್ಲ ಎಂದರೆ ಸರಿ. ಮಾರಾಟದ ಹಣವನ್ನು ಘರಾಣೇಗೆ ಬಳಕೆ

ಮಾಡಿಕೊಂಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಖರೀದಿ ಹಿಡಿದ ಆಸ್ತಿ ವಿನಾಯಕರಾವ್ ಕುಲಕರ್ಣಿ ಇವರ ಆಸ್ತಿ ಅಲ್ಲ ಎಂದು ಸುಳ್ಳಾಗಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾದ ಆಸ್ತಿಗಳಲ್ಲಿ ವಾದಿಯರು ಮತ್ತು 1 ನೇ ಪ್ರತಿವಾದಿಯ ಹಿಸ್ಸೇ ಇದ್ದು, ಖರೀದಿ ಪತ್ರ ಅವರಿಗೆ ಬಂಧನಕಾರಕ ಇರುವುದಿಲ್ಲ ಎಂದರೆ ಸರಿಯಲ್ಲ.

4. ವಾದಿಯರು ಈರಪ್ಪ ಹೊಸಳ್ಳಿ, ಬಸಪ್ಪ ಹೊಸಳ್ಳಿ ಇವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ. ಅವರ ಹೆಸರನ್ನು ನಾನು ನನ್ನ ಪ್ರತಿವಾದ ಪತ್ರದಲ್ಲಿಯಾಗಲೀ, ಸಾಕ್ಷ್ಯ ಪ್ರಮಾಣ ಪತ್ರದಲ್ಲಿಯಾಗಲೀ ಬರೆಯಿಸಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನಂ.2 ರಿಂದ 17 ಇವರನ್ನು ಹೊರತುಪಡಿಸಿ ಬೇರೆ ಖರೀದಿದಾರರ ಹೆಸರು ಹೇಳಲು ಬರುವುದಿಲ್ಲ. ನಾವು ಸುಳ್ಳು ಖರೀದಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).